ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ಮಂಗಳೂರು, ದ.ಕ.
ದಿಃ 17.11.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯ ಹಾಗೂ ಅದರಲ್ಲಿರುವ ರುಜು ನನ್ನದು.

ಮುಖ್ಯ ವಿಚಾರಣೆಃ ವಾದಿ ಪರವಾಗಿ,

1. ವಾದಿಯ ಮೂಲ ಜನನ ಪ್ರಮಾಣ ಪತ್ರವನ್ನು ನಿಪಿ-1 ಎಂದು,
2. ದಿನಾಂಕ 9/6/2022 ರ ಕರ್ನಾಟಕ ಮುನ್ಸಿಪಲ್ ಕಾರ್ಪೋರೇಶನ್ ಕಾಯ್ದೆಯ ಕಲಂ 482 ರಡಿಯ ನೋಟೀಸನ್ನು ನಿಪಿ-2 ಎಂದು, ಎರಡು ಅಂಚೆ ರಶೀದಿಗಳನ್ನು ನಿಪಿ-2(ಎ) ಮತ್ತು ನಿಪಿ-2(ಬಿ) ಎಂದು, ಎರಡು ಅಂಚೆ ಸ್ವೀಕೃತಿಗಳನ್ನು ನಿಪಿ-2(ಸಿ) ಮತ್ತು ನಿಪಿ-2(ಡಿ) ಎಂದು,
3. ವಾದಿಯ ತಾಯಿಯ ಆಧಾರ್ ಕಾರ್ಡಿನ ನೋಟರೀಕೃತ ಪ್ರತಿಯನ್ನು ನಿಪಿ-3 ಎಂದು,
4. ವಾದಿಯ ತಾಯಿಯ ಶಾಲಾ ವರ್ಗಾವಣಾ ಪ್ರಮಾಣ ಪತ್ರದ ನೋಟರೀಕೃತ ಪ್ರತಿಯನ್ನು ನಿಪಿ-4 ಎಂದು,
5. ವಾದಿಯ ತಾಯಿಯ ಚುನಾವಣಾ ಪಡಿತರ ಚೀಟಿಯ ನೋಟರೀಕೃತ ಪ್ರತಿಯನ್ನು ನಿಪಿ-5 ಎಂದು ಗುರುತಿಸಲಾಯಿತು.

(ಮೂಲ ದಾಖಲೆಯೊಂದಿಗೆ ನೋಟರಿ ಪ್ರತಿಯನ್ನು ತಾಳೆ ಹಾಕಿ ನೋಡಿ ನಂತರ ಮೂಲ ದಾಖಲೆಯನ್ನು ಸಾಕ್ಷಿದಾರರಿಗೆ ಹಿಂದುರುಗಿಸಲಾಯಿತು)

ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಎಸ್.ಕೆ. ವಕೀಲರಿಂದ,

ನಾನು ವಾದಿಯ ತಾಯಿಯ ಹೆಸರನ್ನು ಪ್ರತಿವಾದಿಯಲ್ಲಿ ಟ್ರೆಸಾ ತೆರೆಸಾ ಡಿಸೋಜಾ ಎಂದೇ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಪ್ರತಿವಾದಿ ಮೇಲ್ಕಂಡಂತೆ ನಮೂದಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಯ ತಾಯಿಯ ಹೆಸರು ತೆರೆಸಾ ಡಿಸೋಜಾ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನಾನು ದಾವೆಯಲ್ಲಿ ಕೇಳಿದ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ.

ನನ್ನ ಹೇಳಿಕೆ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ.,
ಮಂಗಳೂರು.